ವಿಷಯ:- ವಿಜಾಪುರ ನಗರದಲ್ಲಿ ಸಿಟಿ ಬಸ್ಸುಗಳ ಅಭಾವದಿಂದ ಪ್ರಯಾಣಿಕರಿಗೆ ತೊಂದರೆ.

35(235)

ಶ್ರೀ ಬಸವಗೌಡ ರಾ. ಪಾಟೀಲ (ವಿಜಾಪುರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ವಿಜಾಪುರ ನಗರದಲ್ಲಿ ಸಿಟಿ ಬಸ್ಸುಗಳ ತೀವ್ರ ಅಭಾವದಿಂದ ನಗರದ ಪ್ರಯಾಣಿಕರಿಗೆ ತೀವ್ರ ತೊಂದರೆ ಆಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸಿಟಿ ಬಸ್ಸಿನ ಅವಶ್ಯಕತೆಯನ್ನು ಪೂರೈಸಲು ಸರಕಾರದವರು ಕ್ರಮ ಕೈಗೊಳ್ಳುವುದೇ;

ಇ) ಹಾಗಿದ್ದಲ್ಲಿ, ಎಷ್ಟು ಬಸ್ಸುಗಳನ್ನು ನೀಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ವಿಜಾಪುರ ನಗರದಲ್ಲಿ ಈಗ 24 ಅನುಸೂಚಿಗಳು ಪ್ರತಿದಿನ ಒಟ್ಟು 4994 ಕಿ.ಮೀ.ಗಳ ಸಾರಿಗೆ ಸೇವೆಯನ್ನು ಒದಗಿಸುತ್ತಿವೆ. ಆದಾಗ್ಯೂ 1997-98ನೇ ಸಾಲಿನಲ್ಲಿ ವಿಜಾಪುರ ನಗರದಲ್ಲಿ 4 ಅನುಸೂಚಿಗಳನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

ವಿಷಯ:- ಜಿಲ್ಲಾ ಸಹಕಾರ ಬ್ಯಾಂಕುಗಳ ಸಾಲದ ಬಗ್ಗೆ.

36(54)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1995-96 ಹಾಗೂ 1996-97ನೇ ಸಾಲುಗಳಲ್ಲಿ ಜಿಲ್ಲಾ ಸಹಕಾರ ಬ್ಯಾಂಕುಗಳ ಮುಖಾಂತರ ವಿತರಣೆಯಾದ ಬೆಳೆ ಸಾಲದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ಎಷ್ಟು ರೈತ ಕುಟುಂಬಗಳು ಈ ಬೆಳೆ ಸಾಲ ಸೌಲಭ್ಯ ಪಡೆದಿದೆ. ರೈತ ಕುಟುಂಬ ಸಾಲದ ಸರಾಸರಿ ಪ್ರಮಾಣವೆಷ್ಟು;

ಇ) ಬೆಳೆ ಸಾಲ ಸೌಲಭ್ಯ ಪಡೆಯದ ಕೃಷಿ ಕುಟುಂಬಗಳ ಸಂಖ್ಯೆ ಎಷ್ಟು; ಒಟ್ಟು ಕೃಷಿ ಕುಟುಂಬಗಳ ಸಂಖ್ಯೆಯಲ್ಲಿ ಯಾವ ಅನುಪಾತದಲ್ಲಿ ಇವೆ (1995-96 ಹಾಗೂ 1996-97ರ ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು);

ಈ) ಬೆಳೆ ಸಾಲ ಸೌಲಭ್ಯ ಪಡೆಯದ ಕೃಷಿ ಕುಟುಂಬಗಳಿಗೆ ಸಹಕಾರಿ ಬ್ಯಾಂಕಿಗೆ ವ್ಯವಸ್ಥೆಯಿಂದ ಸಾಲ ಸೌಲಭ್ಯ ವಿಸ್ತರಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):-

ಅ) ರಾಜ್ಯದಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ 1995-96ನೇ ಸಾಲಿನಲ್ಲಿ ರೂ. 450.68 ಕೋಟಿಗಳ ಹಾಗೂ 1996-97ನೇ ಸಾಲಿನಲ್ಲಿ (ನವೆಂಬರ್ 96ರ ಅಂತ್ಯಕ್ಕೆ) ರೂ. 403.36 ಕೋಟಿಗಳ ಬೆಳೆ ಸಾಲ ವಿತರಿಸಿವೆ (ಜಿಲ್ಲಾವಾರು ಮಾಹಿತಿ ಅನುಬಂಧ-1 ನೀಡಿದೆ).

ಆ) 1995-96ನೇ ಸಾಲಿನಲ್ಲಿ 6,54,932 ರೈತ ಕುಟುಂಬಗಳು ಬೆಳೆ ಸಾಲದ ಸೌಲಭ್ಯ ಪಡೆದಿದ್ದಾರೆ. 95-96ನೇ ಸಾಲಿನಲ್ಲಿ ಪ್ರತಿ ರೈತ ಕುಟುಂಬ ಪಡೆದ ಸಾಲದ ಸರಾಸರಿ 6,880.00 ರೂ.ಗಳು.

ಇ) ಬೆಳೆ ಸಾಲ ಪಡೆಯದ ಕೃಷಿ ಕುಟುಂಬಗಳ ಸಂಖ್ಯೆ 1995-96ರಲ್ಲಿ 51.21 ಲಕ್ಷ ಹಾಗೂ 1996-97ರಲ್ಲಿ (ನವೆಂಬರ್ 96ರ ವರೆಗೆ) 52.50 ಲಕ್ಷ ಆಗಿರುತ್ತದೆ. ಒಟ್ಟು ಕೃಷಿ ಕುಟುಂಬಗಳಿಗೆ, ಇದರ ಅನುಪಾತ ಕ್ರಮವಾಗಿ ಶೇಕಡ 88.66 ಹಾಗೂ ಶೇಕಡ 90.89 ರಷ್ಟಿರುತ್ತದೆ (ಜಿಲ್ಲಾವಾರು ಮಾಹಿತಿ ಅನುಬಂಧ-2ರಲ್ಲಿ ನೀಡಲಾಗಿದೆ.

ಈ) ಸಹಕಾರ ಬ್ಯಾಂಕಿನಿಂದ ಬೆಳೆ ಸಾಲ ಸೌಲಭ್ಯವನ್ನು ಪಡೆದ ಕೃಷಿ ಕುಟುಂಬಗಳ ವಿವರ ಈ ಕೆಳಕಂಡಂತಿದೆ

(ರೂ. ಕೋಟಿಗಳಲ್ಲಿ)

ವರ್ಷ	ಸಾಲದ ಗುರಿ	ಸಾಧನೆ
1994-95	220.00	303.54
95-96	250.00	450.68
96-97	350.00	403.36
	ನವೆಂಬರ್ 1996 ರವರೆಗೆ)	

ಆದುದರಿಂದ, ಜಿಲ್ಲಾ ಬ್ಯಾಂಕುಗಳು ನೀಡುತ್ತಿರುವ ಬೆಳೆ ಸಾಲದ ಪ್ರಮಾಣ ಹೆಚ್ಚಾಗಿದೆ.

ಅನುಬಂಧ

1995-96 ಹಾಗೂ 96-97 (ನವೆಂಬರ್ 96ರ ಅಂತ್ಯಕ್ಕೆ) ನೇ ಸಾಲುಗಳಲ್ಲಿ ಜಿಲ್ಲಾ ಬ್ಯಾಂಕುಗಳು ವಿತರಿಸಿರುವ ಬೆಳೆ ಸಾಲದ ವಿವರ.

ಕ್ರಮ ಸಂಖ್ಯೆ	ಜಿಲ್ಲಾ ಬ್ಯಾಂಕಿನ ಹೆಸರು	ವಿತರಿಸಲ್ಪಟ್ಟ ಬೆಳೆ ಸಾರ	
		1995-96	1996-97 (ನವೆಂಬರ್ 96ಕ್ಕೆ)
		ಮೊತ್ತ	ಮೊತ್ತ
1.	ಬೆಂಗಳೂರು	2312.04	1043.53
2.	ಕೋಲಾರ	1663.65	955.11
3.	ಚಿತ್ರದುರ್ಗ	1442.41	882.82
4.	ಶಿವಮೊಗ್ಗ	1610.57	1391.34
5.	ತುಮಕೂರು	2132.97	1355.41
6.	ಮೈಸೂರು	898.86	759.65
7.	ಮಂಡ್ಯ	1271.31	321.38
8.	ಹಾಸನ	591.16	1062.89
9.	ದಕ್ಷಿಣ ಕನ್ನಡ - ಮಂಗಳೂರು	3341.41	3889.22
10.	ಕೊಡಗು	3366.90	4632.88
11.	ಚಿಕ್ಕಮಗಳೂರು	1432.56	1859.85
12.	ಬೆಳಗಾಂ	8252.83	634.88
13.	ಬಿಜಾಪುರ	3173.07	3167.85
14.	ಕೆ.ಸಿ.ಸಿ.ಬಿ. ಧಾರವಾಡ	5852.95	6870.86
15.	ಕೆನರಾ, ಸಿರ್ಸಿ	1468.98	1561.93
16.	ಗುಲ್ಬರ್ಗಾ	1126.82	1144.76
17.	ಬೀದರ್	2670.46	913.86
18.	ರಾಯಚೂರು	504.45	414.37
19.	ಬಳ್ಳಾರಿ	1954.12	1763.07
	ಒಟ್ಟು	45067.52	40335.66

ಅನುಬಂಧ-2

ಬೆಳೆ ಸಾಲ ಪಡೆಯುವ ಕೃಷಿ ಕುಟುಂಬಗಳ ಸಂಖ್ಯೆ ಹಾಗೂ ಅದರ ಅನುಪಾತದ ವಿವರ

ಸಂಖ್ಯೆ ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಒಟ್ಟು ಕೃಷಿ ಕುಟುಂಬ	ಸಾಲ ಪಡೆಯದ ಕೃಷಿ ಕುಟುಂಬ		ಒಟ್ಟು ರೈತ ಕುಟುಂಬಕ್ಕೆ ಸಾಲ ಪಡೆಯದ ರೈತ ಕುಟುಂಬದ ಪ್ರಮಾಣ	
			1995-96	1996-97 (ನವೆಂಬರ್ 96ಕ್ಕೆ)	1995-96	1996-97 (ನವೆಂಬರ್ 96ಕ್ಕೆ)
1	2	3	4	5	6	7
1.	ಬೆಂಗಳೂರು	3.37	3.15	3.26	93.17	96.74
2.	ಕೋಲಾರ	3.06	2.84	2.95	92.81	96.41
3.	ಚಿತ್ರದುರ್ಗ	2.93	2.78	2.83	94.88	96.59
4.	ಶಿವಮೊಗ್ಗ	2.17	1.84	1.91	84.79	88.02
5.	ತುಮಕೂರು	4.17	3.91	4.04	93.76	96.88
6.	ಮೈಸೂರು	4.37	4.23	4.27	96.80	97.71
7.	ಮಂಡ್ಯ	3.93	3.70	3.87	94.15	88.58
8.	ಹಾಸನ	3.28	3.19	3.17	97.26	96.65
9.	ದಕ್ಷಿಣ ಕನ್ನಡ	2.68	2.30	2.32	85.82	86.57

1	2	3	4	5	6	7
10.	ಕೊಡಗು	0.55	0.31	0.33	56.36	60.00
11.	ಚಿಕ್ಕಮಗಳೂರು	1.55	1.48	1.47	95.48	94.84
12.	ಬೆಳಗಾಂ	4.25	3.47	3.38	81.65	79.53
13.	ಬಿಜಾಪುರ	4.00	3.38	3.48	84.50	87.00
14.	ಧಾರವಾಡ	3.92	2.94	2.77	75.00	70.66
15.	ಉತ್ತರ ಕನ್ನಡ	1.42	0.98	1.07	69.01	75.35
16.	ಗುಲ್ಬರ್ಗಾ	4.25	3.92	3.99	92.24	93.88
17.	ಬೀದರ್	1.66	0.90	1.41	54.22	84.94
18.	ರಾಯಚೂರು	3.84	3.76	3.78	97.92	98.44
19.	ಬಳ್ಳಾರಿ	2.36	2.13	2.20	90.25	93.22
	ಒಟ್ಟು	57.76	51.21	52.50	88.66	90.89